(ಅ) ಹಾಗಿದ್ದಲ್ಲಿ, ಹಾನಿಗೀಡಾದ ಚಿಕ್ಕ ಹಿಡುವಳಿದಾರರಿಗೆ ದೊಡ್ಡ ಹಿಡುವಳಿದಾರರಿಗೆ ಏನಾದರೂ ಪರಿಹಾರ ಕೊಡಲಾಗುವುದೇ;

(ಇ) ಹಾಗಿಲ್ಲದಿದ್ದಲ್ಲಿ ಅವರುಗಳು ಪಡೆದಿರುವ ಸಾಲದಲ್ಲಿ ಅಥವಾ ಮತ್ತಾವುದಾದರೂ ರೂಪದಲ್ಲಿ ವಿನಾಯಿತಿ ಮಾಡಲಾಗುವುದೇ;

(ಈ) ಪ್ರತಿ ವರ್ಷ ಇಂತಹ ಹಾನಿಯನ್ನು ತಪ್ಪಿಸಲು ತುಂಬಾಕು ಬೆಳೆಗಾರರಿಗೆ ಏನಾದರೂ ಶಾಶ್ವತ ಪರಿಹಾರ ಯೋಚಿಸಲಾಗಿದೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

(ಅ) ಹೌದು.

(ಆ) ಇಲ್ಲ,

(ಇ) ಸಧ್ಯಕ್ಕೆ ಈ ವಿಷಯ ಪರಿಶೀಲನೆಯಲ್ಲಿಲ್ಲ.

(ಈ) ಇಲ್ಲ.

ಚಿಕ್ಕ ಗಂರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ವಿವಿಧ ಭಾಷಾ ಮಾಧ್ಯಮದ ಪ್ರಾಥಮಿಕ ಮಾಧ್ಯಮಿಕ ಶಾಲೆಗಳ ಬಗ್ಗೆ

೧೨೪೨. ಶ್ರೀ ಬಾಬುರೆಡ್ಡಿ ತುಂಗಳ (ಬೀಳಗಿ). —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಯಾವ ಯಾವ ಭಾಷೆಯು ಮಾಧ್ಯಮಗಳಿವೆ;

(ಆ) ಆಯಾ ಭಾಷಾ ಮಾಧ್ಯಮಿಕ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು; ಹಾಗೂ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಸಂಖ್ಯೆ ಎಷ್ಟು ;

(ಇ) ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಯಾವ ಯಾವ ಭಾಷೆಯು ಮಾಧ್ಯಮಗಳಿವೆ;

(ಈ) ಅಲ್ಲಿರುವ ಮಾಧ್ಯಮಿಕ ಶಾಲೆಗಳೆಷ್ಟು; ಹಾಗೂ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

(ಅ) ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮಲಯಾಳಂ, ಗುಜರಾತಿ ಹಾಗೂ ಮರಾಠಿ, ಹಿಂದಿ, ಮಾಧ್ಯಮಗಳ ಶಾಲೆಗಳು ಇದೆ.

(ಆ) ಪಟ್ಟಿಯನ್ನು ಲಗತ್ತಿಸಿದೆ.

(ಇ) ಕನ್ನಡ, ಇಂಗ್ಲೀಷ್, ಉರ್ದು, ತಮಿಳು, ತೆಲುಗು, ಮರಾಠಿ, ಹಿಂದಿ, ಮಾಧ್ಯಮದ

(ಈ) ಪಟ್ಟಿಯನ್ನು ಲಗತ್ತಿಸಿದೆ.

ಪರಿವರ್ತಿತ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ ೧೨೪(ಎ)ಕ್ಕೆ ಸಂಬಂಧಿಸಿದ ಪಟ್ಟಿ ರಾಜ್ಯದಲ್ಲಿರುವ ಭಾಷಾವಾರು ಶಾಲೆಗಳ ಸಂಖ್ಯೆ : ಪ್ರಾಥಮಿಕ ಶಾಲೆಗಳು

ಭಾಷಾ ಮಾಧ್ಯಮ	ಶಾಲೆಗಳ ಸಂ.	ಮಕ್ಕಳ ಸಂಖ್ಯೆ	ಶಿಕ್ಷಕರ ಸಂಖ್ಯೆ
೧ ಕನ್ನಡ	೩೩೫೮೮	೪೮೪೨೩೭೭	೯೮೯೯
೨ ಇಂಗ್ಲೀಷ್	೮೯೫	೩೩೮೫೮೬	೭೭೩೬
೩ ಉರ್ದು	೩೦೫೨	೪೧೬೮೬೧	೧೨೧೩೫
೪ ತಮಿಳು	೨೩೮	೬೩೫೬೦	೧೫೧೪
೫ ತೆಲುಗು	೧೧೪	೧೭೬೭೪	೪೫೬
೬ ಮಲೆಯಾಳಂ	೭	೧೩೭೯	೨೭
೭ ಮರಾಠಿ	೯೨೯	೨೧೨೪೬೭	೪೪೨೩
೮ ಹಿಂದಿ	೨೯	೨೯೩೫	೨೩೬
೯ ಗುಜರಾತಿ	೪	೫೦೯	೧೪
೧೦ ಸಿಂಧಿ	೧	೨೬೮	೧೦
ಒಟ್ಟು	೩೮೮೫೫೫	೫೯೦೨೬೧೬	೧೨೫೫೪೦
ಪ್ರೌಢಶಾಲೆಗಳು			
೧ ಕನ್ನಡ	೩೩೫೨	೯೩೯೪೯	೨೫೩೬೦
೨ ಇಂಗ್ಲೀಷ್	೨೭೩	೨೩೮೧೦	೧೮೬೮
೩ ಉರ್ದು	೧೦೬	೨೫೯೬೬	೧೦೫೩
೪ ತಮಿಳು	೧	೩೩೫	೯
೫ ತೆಲುಗು	೩	೨೬೦೭	೭೭
೬ ಹಿಂದಿ	೧೬	೧೯೪೨	೫೩
೭ ಮರಾಠಿ	೧೦೯	೨೭೫೨೦	೮೫೨
ಒಟ್ಟು	೩೮೬೦	೯೨೨೦೭೯	೨೮೪೬೦

ಪಾಲಿಟೆಕ್ನಿಕ್ ಹಾಗೂ ಶಿಕ್ಷಣದ ಗುಣಮಟ್ಟ ಪರೀಕ್ಷಿಸಲು ಸಾಕಷ್ಟು ತಾಂತ್ರಿಕ ಸಿಬ್ಬಂದಿಯಂ ನೇಮಕ ಹಾಗೂ ವರದಿಗಳ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದು

೧೪೪. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು ? ಹಾಗೂ ಈ ವಿದ್ಯಾ ಸಂಸ್ಥೆಗಳ ಹಾಗೂ ಶಿಕ್ಷಣದ ಗುಣಮಟ್ಟಗಳನ್ನು ಪರೀಕ್ಷಿಸಲು ನಿರ್ದೇಶನಾಲಯದಲ್ಲಿ ನೇಮಕ ಮಾಡಲಾಗಿರುವ ಸಿಬ್ಬಂದಿ ಸಂಖ್ಯೆ ಎಷ್ಟು ? (ಪೂರ್ಣ ವಿವರಗಳನ್ನು ನೀಡುವುದು)

(ಆ) ೧೯೮೦ನೇ ಇಸವಿಗೆ ಪೂರ್ವಾನ್ವಯವಾಗಿ ಇದ್ದ ೩೬ ಪಾಲಿಟೆಕ್ನಿಕ್‌ಗಳ ಹಾಗೂ ಶಿಕ್ಷಣದ ಗುಣಮಟ್ಟಗಳನ್ನು ಪರೀಕ್ಷಿಸಲು ನಿರ್ದೇಶನಾಲಯದಲ್ಲಿ ಇದ್ದ ತಾಂತ್ರಿಕ ಸಿಬ್ಬಂದಿ ಸಂಖ್ಯೆ ಎಷ್ಟು ?

(ಇ) ೮೬ನೇ ಸಾಲಿನ ಪಾಲಿಟೆಕ್ನಿಕ್‌ಗಳ ಹಾಗೂ ಶಿಕ್ಷಣದ ಗುಣಮಟ್ಟಗಳನ್ನು ಪರೀಕ್ಷಿಸಲು ನಿರ್ದೇಶನಾಲಯ ಹೊಂದಿರುವ ತಾಂತ್ರಿಕ ಸಿಬ್ಬಂದಿ ಸಂಖ್ಯೆ ಎಷ್ಟು ?

(ಈ) ಈ ಸಿಬ್ಬಂದಿಯಿಂದ ಪಾಲಿಟೆಕ್ನಿಕ್ ಹಾಗೂ ಶಿಕ್ಷಣದ ಗುಣಮಟ್ಟಗಳನ್ನು ಪರೀಕ್ಷಿಸಿ ವರದಿಗಳನ್ನು ಏನಾದರೂ ಪಡೆಯಲಾಗಿದೆಯೇ ?